"ಮಧುರ ಮಕ್ಕಳೇ- ಶಿವಬಾಬಾರವರ ಚಿತ್ರವನ್ನು ಒಂದು ಕೋಣೆಯಲ್ಲಿ ಇಟ್ಟುಕೊಳ್ಳಿ, ಗಳಿಗೆ-ಗಳಿಗೆಯೂ ಹೋಗಿ ಅದರ ಸಮ್ಮುಖದಲ್ಲಿ ಕುಳಿತು ತಂದೆಯೊಂದಿಗೆ ಮಾತನಾಡಿ ಆಗ ಇಡೀ ದಿನ ನೆನಪು ಸ್ಥಿರವಾಗಿರುವುದು"

ಪ್ರಶ್ನೆ: ನವೀನತೆಯ ಮತ್ತು ಸುಂದರ ಪ್ರೀತಿಯು ಯಾವುದಾಗಿದೆ, ಅದರ ಅನುಭೂತಿಯು ಕೇವಲ ಸಂಗಮದಲ್ಲಿಯೇ ಆಗುತ್ತದೆ?

ಉತ್ತರ: ವಿಚಿತ್ರ ತಂದೆಯ ಜೊತೆ ಪ್ರೀತಿ ಮಾಡುವುದೇ ನವೀನತೆಯಪ್ರೀತಿಯಾಗಿದೆ. ನಿಮಗೆ ಗೊತ್ತಿದೆ- ನಿರಾಕಾರ ವಿಚಿತ್ರ ತಂದೆಯು ಈ ಸಾಕಾರದಲ್ಲಿ ಬಂದಿದ್ದಾರೆ, ನಾವು ಅವರ ಸಮ್ಮುಖದಲ್ಲಿ ಕುಳಿತಿದ್ದೇವೆ, ನಮಗೆ ಈ ಸಂಗಮಯುಗದಲ್ಲಿ ನೇರವಾಗಿ ಈಶ್ವರನ ಪ್ರೀತಿಯು ಸಿಗುತ್ತದೆ. ಇದು ಹೊಸ ಮತ್ತು ಅತಿಸುಂದರ ಪ್ರೀತಿಯಾಗಿದೆ. ಇಡೀ ಕಲ್ಪವು ದೇಹಧಾರಿಗಳೊಂದಿಗೆ ಪ್ರೀತಿ ಮಾಡಿದಿರಿ. ಈಗ ತಂದೆಯನ್ನು ಪ್ರೀತಿ ಮಾಡಬೇಕಾಗಿದೆ. ಇಂತಹ ಪ್ರೀತಿಯು ಸಂಗಮದಲ್ಲಿಯೇ ಆಗುತ್ತದೆ.

ಗೀತೆ: ನನ್ನ ಮನದ ಬಾಗಿಲಲ್ಲಿ ಬಂದವರು ಯಾರು............

ಓಂ ಶಾಂತಿ. ಮಕ್ಕಳಿಗೆ ಗೊತ್ತಿದೆ- ಬೇಹದ್ದಿನ ತಂದೆಯು ವಿಚಿತ್ರವಾಗಿದ್ದಾರೆ ಮತ್ತು ಈಗ ಒಂದು ಹೊಸ ಪ್ರೀತಿಯನ್ನು ಪಡೆದು ನಾವು ತಂದೆಯ ಬಳಿ ಕುಳಿತಿದ್ದೇವೆ. ಇದನ್ನೇ ಹೊಸ ಪ್ರೀತಿಯೆಂದು ಹೇಳುತ್ತಾರೆ. ಈಶ್ವರನ ಪ್ರೀತಿಯು ಮಕ್ಕಳಿಗೆ ಕೇವಲ ಒಂದೇಸಾರಿ ಸಿಗುತ್ತದೆ. ಮಕ್ಕಳೂ ಸಹ ತಿಳಿದುಕೊಳ್ಳುತ್ತೀರಿ- ಅವಶ್ಯವಾಗಿ ಪರಮಪಿತ ಪರಮಾತ್ಮನನ್ನು ನಾವೆಲ್ಲರೂ ನೆನಪು ಮಾಡುತ್ತೇವೆ ಮತ್ತು ಅವರು ಕುಳಿತು ಮಕ್ಕಳಿಗೆ ಓದಿಸುತ್ತಾರೆ. ಆ ನಿರಾಕಾರ ವಿಚಿತ್ರ ತಂದೆಯು ಈ ಬ್ರಹ್ಮಾರವರಲ್ಲಿ ಬಂದಿದ್ದಾರೆಂದರೆ ಪರಮಪಿತ ಪರಮಾತ್ಮ ನಾವಾತ್ಮಗಳ ತಂದೆಯಾಗಿದ್ದಾರೆ. ನಾವೀಗ ಅವರನ್ನು ಅರ್ಥ ಮಾಡಿಕೊಳ್ಳುತ್ತಿದ್ದೇವೆ. ಈ ಪ್ರೀತಿಯೂ ಸಹ ಸುಂದರವಾಗಿದೆ. ಹಾಗೆ ನೋಡಿದರೆ ಸದಾ ದೇಹಧಾರಿಗಳನ್ನೇ ಪ್ರೀತಿ ಮಾಡಲಾಗುತ್ತದೆ. ಇದು ವಿದೇಹಿ ಅಥವಾ ದೇಹವಿಲ್ಲದವರ ಜೊತೆ ಪ್ರೀತಿಯಾಗಿದೆ. ನಾವು ಅವರ ಸಮ್ಮುಖದಲ್ಲಿ ಕುಳಿತಿದ್ದೇವೆ, ಅವರು ಬಂದು ಬಹಳ ಪ್ರೀತಿಯಿಂದ ಓದಿಸುತ್ತಾರೆ ಅಂದಾಗ ಹೊಸಮಾತಾಯಿತಲ್ಲವೆ. ಮೊದಲು ಹಣ ಸಿಗಲಿ, ಮಹಲು ಸಿಗಲಿ ಎಂಬ ಯಾವ ಆಸೆಗಳಿದ್ದವು ಅವೆಲ್ಲಾ ಆಸೆಗಳು ಬದಲಾಗಿಬಿಟ್ಟಿದೆ. ಇಡೀ ಪ್ರಪಂಚದಲ್ಲಿ ನಿಮ್ಮ ಆಸೆಯು ಬದಲಾಗಿದೆ. ನಾವೀಗ ತಂದೆಯಿಂದ ವಿಶ್ವದ ಮಾಲೀಕರಾಗುವ ಪುರುಷಾರ್ಥ ಮಾಡುತ್ತಿದ್ದೇವೆ. ಈಗ ನೀವು ಸಮ್ಮುಖದಲ್ಲಿ ಕುಳಿತಿದ್ದೀರಿ, ನಿಮಗೆ ಗೊತ್ತಿದೆ, ಅವರೇ ಎಲ್ಲಾ ಆತ್ಮಗಳ ತಂದೆ ಪತಿತ-ಪಾವನ ಶಿವನಾಗಿದ್ದಾರೆ. ಎಲ್ಲರೂ ಅವರನ್ನೇ ನೆನಪು ಮಾಡುತ್ತಾರೆ. ಈಗ ನೀವು ಮಕ್ಕಳು ಸಮ್ಮುಖದಲ್ಲಿ ಕುಳಿತಿದ್ದೀರಿ. ನಿಮ್ಮ ಹೃದಯದಲ್ಲಿ ಉಲ್ಲಾಸವಿದೆ- ಬೇಹದ್ದಿನ ತಂದೆಯಿಂದ ಬೇಹದ್ದಿನ ಆಸ್ತಿಯನ್ನು ಪಡೆಯಬೇಕು. ಎಷ್ಟೊಂದು ವಿಚಿತ್ರ, ಅದ್ಭುತ ತಂದೆಯಾಗಿದ್ದಾರೆ! ತಂದೆಯು ಹೇಗೆ ತನ್ನವರನ್ನಾಗಿ ಮಾಡಿಕೊಂಡು ಓದಿಸುತ್ತಾರೆ ಎಂಬುದನ್ನು ಕೇವಲ ನೀವಷ್ಟೇ ತಿಳಿದುಕೊಂಡಿದ್ದೀರಿ ಅಂದಮೇಲೆ ಗಳಿಗೆ-ಗಳಿಗೆಯೂ ನೆನಪು ಮಾಡುತ್ತಿರಬೇಕೆಂದರೆ ಇಂತಹ ಯಾವ ಯುಕ್ತಿಯನ್ನು ಮಾಡಬೇಕು? ತಂದೆಯು ಸಲಹೆ ಕೊಡುತ್ತಾರೆ, ಪ್ರತಿಯೊಬ್ಬರೂ ತಮ್ಮ ಮನೆಯಲ್ಲಿ ಶಿವನ ಚಿತ್ರವನ್ನು ಇಟ್ಟುಕೊಳ್ಳಿ. ಶಿವತಂದೆಯ ಚಿತ್ರವನ್ನು ನೋಡಿ ತಿಳಿಯುತ್ತದೆ- ಬೇಹದ್ದಿನ ತಂದೆ, ಪತಿತ-ಪಾವನ, ಪಾವನ ಪ್ರಪಂಚವನ್ನು ಸ್ಥಾಪನೆ ಮಾಡಲು ಬಂದಿದ್ದಾರೆ, ಅವರಿಂದ ನಾವೀಗ 5000 ವರ್ಷಗಳ ಹಿಂದಿನ ತರಹ ಸ್ವರ್ಗದ ಸ್ವರಾಜ್ಯದ ಆಸ್ತಿಯನ್ನು ಪಡೆಯುತ್ತಿದ್ದೇವೆ. ನಾವು ಸ್ವರ್ಗದಲ್ಲಿ ಹೋಗಿ ಶರೀರದ ಜೊತೆ ರಾಜ್ಯ ಮಾಡುತ್ತೇವೆಂದು ಆತ್ಮವು ತಿಳಿದುಕೊಂಡಿದೆ. ಯಾವ ಮಾತು ಎಂದೂ ಸ್ವಪ್ನದಲ್ಲಿಯೂ ಇರಲಿಲ್ಲವೋ ಅವರು ಬಂದಿದ್ದಾರೆಂದರೆ ಒಂದು ಕೋಣೆಯಲ್ಲಿ ಶಿವತಂದೆಯ ಚಿತ್ರವನ್ನಿಟ್ಟು ಅದರಲ್ಲಿ ಬರೆಯಬೇಕು- ತಂದೆಯು ಬಂದಿದ್ದಾರೆ. ಅವರು ಸ್ವರ್ಗದ ಸ್ಥಾಪನೆ ಮಾಡಲು, ನರಕವಾಸಿಗಳನ್ನು ಸ್ವರ್ಗವಾಸಿಗಳನ್ನಾಗಿ ಮಾಡುವುದಕ್ಕಾಗಿಯೇ ಬರಬೇಕಾಗಿದೆ. ಗಳಿಗೆ-ಗಳಿಗೆಯೂ ಶಿವತಂದೆಯನ್ನು ನೋಡುತ್ತಿರುತ್ತೀರೆಂದರೆ ನೆನಪಿರುವುದು. ಚಿತ್ರವನ್ನು ಕೊರಳಿನಲ್ಲಿಯೂ ಹಾಕಿಕೊಂಡಿರುತ್ತಾರೆ. ಹೇಗೆ ಪತಿಯ ಚಿತ್ರವನ್ನು ಕೊರಳಲ್ಲಿ ಹಾಕಿಕೊಂಡಿರುತ್ತಾರಲ್ಲವೆ. ನೀವು ಮಕ್ಕಳಿಗಾಗಿ ತಯಾರಿ ಮಾಡುತ್ತಿದ್ದಾರೆ. ಪಾರಲೌಕಿಕ ತಂದೆಯನ್ನು ನೆನಪು ಮಾಡುವುದು ಬಹಳ ವಿಚಿತ್ರವಾಗಿದೆ. ಮತ್ತೆಲ್ಲರ ನೆನಪನ್ನು ತೆಗೆದು ಒಬ್ಬರನ್ನು ನೆನಪು ಮಾಡಬೇಕಾಗಿದೆ. ಹೇಗೆ ಭಕ್ತಿಯಲ್ಲಿಯೂ ಸಹ ತಮ್ಮ ಮನೆಯಲ್ಲಿ ಪೂಜಾಕೋಣೆ ಅಥವಾ ಮಂದಿರವನ್ನು ಮಾಡುತ್ತಾರಲ್ಲವೆ. ಹಾಗೆಯೇ ಜ್ಞಾನಮಾರ್ಗದಲ್ಲಿಯೂ ಸಹ ಕೋಣೆಯನ್ನು ಮಾಡಿ ಅದರಲ್ಲಿ ಕೇವಲ ಶಿವತಂದೆಯ ಚಿತ್ರವನ್ನಿಡಬೇಕು. ಅದರಿಂದ ಮನುಷ್ಯರು ತಿಳಿಯುತ್ತಾರೆ- ಬ್ರಹ್ಮಾಕುಮಾರಿಯರ ಮುರುಳಿಯು ವಿಕಾರದಿಂದ ಬಿಡಿಸುತ್ತದೆ ಅಂದಾಗ ಇದೆಲ್ಲವೂ ಒಳ್ಳೆಯದಲ್ಲವೆ. ಪಾವನರಾಗಲು ಅವಶ್ಯವಾಗಿ ವಿಕಾರಗಳನ್ನಂತೂ ಬಿಡಬೇಕಾಗುವುದು. ಭಕ್ತಿಯನ್ನು ಏಕೆ ಬಿಡುತ್ತೀರೆಂದು ಕೋಪಿಸಿಕೊಳ್ಳುತ್ತಾರೆ ಅದಕ್ಕೆ ತಿಳಿಸಿ, ಒಳ್ಳೆಯದು ನಾವು ಭಕ್ತಿಯನ್ನೇನೋ ಮಾಡುತ್ತೇವೆ ಆದರೆ ಒಬ್ಬರದನ್ನು ಬಿಟ್ಟರೆ ಇನ್ನ್ಯಾರದನ್ನೂ ಮಾಡುವುದಿಲ್ಲ. ಮತ್ತೆಲ್ಲಾ ಸಂಘಗಳಿಂದ ಬುದ್ಧಿಯನ್ನು ದೂರಮಾಡಬೇಕಾಗಿದೆ.

ನಿಮ್ಮ ಯುದ್ಧವು ಮಾಯೆಯ ಜೊತೆಯಲ್ಲಿದೆ. ನೀವು ತಂದೆಯನ್ನು ನೆನಪು ಮಾಡುತ್ತೀರಿ, ಮಾಯೆಯು ನೆನಪನ್ನು ದೂರ ಮಾಡುವ ಪ್ರಯತ್ನಪಡುತ್ತದೆ. ನಮಗೆ ಶಿವತಂದೆಯಿಂದ ಆಸ್ತಿಯು ಸಿಗುತ್ತದೆ, ಈ ರೀತಿ ನೆನಪು ಮಾಡುತ್ತಾ ಇರಿ. ಶಿವತಂದೆಯನ್ನು ನೋಡುತ್ತಾ ಇರಿ ಆಗ ನಿಮ್ಮ ಮನೆಯೇ ವೈಕುಂಠವಾಗಿಬಿಡುವುದು. ಹೇಗೆ ಮೀರಾ ಭಕ್ತಿ ಮಾಡುತ್ತಿದ್ದಳು ಆಗ ಆಕೆಗೆ ವೈಕುಂಠದ ಸಾಕ್ಷಾತ್ಕಾರವಾಗುತ್ತಿತ್ತು. ಅವರಿಗೂ ಸಹ ಸಾಕ್ಷಾತ್ಕಾರ ಮಾಡಿಸುವವರು ಶಿವತಂದೆಯಾಗಿದ್ದಾರೆ. ಈಗ ಶಿವತಂದೆಯಿಂದ ವಿಶ್ವದ ಮಾಲೀಕರಾಗುತ್ತೇವೆಂದು ನಿಮ್ಮ ಬುದ್ಧಿಯಲ್ಲಿ ಬಂದಿದೆ. ಶಿವ ಏನು ಮಾಡುತ್ತಾರೆ? ಏಕೆ ಅವರಿಗೆ ಬಲಿಹಾರಿಯಾಗುತ್ತಾರೆ? ಎಂದು ಭಕ್ತಿಮಾರ್ಗದಲ್ಲಿ ಗೊತ್ತಿರಲಿಲ್ಲ ಆದರೆ ಈಗ ನೀವು ತಿಳಿದುಕೊಳ್ಳುತ್ತೀರಿ- ಶಿವತಂದೆಯು ಎಲ್ಲರಿಗಿಂತ ಶ್ರೇಷ್ಠನಾಗಿದ್ದಾರೆ, ಅವರನ್ನೇ ಪರಮಾತ್ಮನೆಂದು ಹೇಳಲಾಗುತ್ತದೆ ಅಂದಮೇಲೆ ಪರಮಾತ್ಮನಿಂದ ಅವಶ್ಯವಾಗಿ ಹೊಸವಸ್ತು ಸಿಗುವುದು ಆದ್ದರಿಂದ ಅವರನ್ನು ಸ್ವರ್ಗದ ರಚಯಿತನೆಂದು ಹೇಳಲಾಗುತ್ತದೆ. ಸ್ವರ್ಗದಲ್ಲಿ ಶ್ರೀಕೃಷ್ಣನಿರುತ್ತಾನೆ, ಶ್ರೀಕೃಷ್ಣನನ್ನು ತಂದೆ ಎಂದು ಹೇಳುವುದಿಲ್ಲ ಏಕೆಂದರೆ ಅತ ಚಿಕ್ಕಮಗುವಾಗಿದ್ದಾನೆ. ಸ್ವರ್ಗದ ಸ್ಥಾಪನೆ ಮಾಡುವವರು ನಿರಾಕಾರ ತಂದೆಯಾಗಿದ್ದಾರೆ, ಅವರು ದೇಹಧಾರಿಯಲ್ಲ. ಹಾಗೆ ನೋಡಿದರೆ ಇತ್ತೀಚೆಗೆ ಎಲ್ಲರನ್ನೂ ತಂದೆಯೆಂದು ಹೇಳುತ್ತಿರುತ್ತಾರೆ. ಗಾಂಧಿಯನ್ನೂ ಬಾಪೂಜಿ ಎಂದು ಹೇಳುತ್ತಾರೆ ಆದರೆ ಎಲ್ಲಾ ಧರ್ಮದವರು ಹೇಳುವುದಿಲ್ಲ. ಮನುಷ್ಯರು ಇದರ ಅರ್ಥವನ್ನು ತಿಳಿದುಕೊಂಡಿಲ್ಲ. ನಿಮಗೆ ಗೊತ್ತಿದೆ- ಎಲ್ಲರ ಬಾಪೂಜಿ ಶಿವತಂದೆಯಾಗಿದ್ದಾರೆ. ಶಿವ ದಾದಾ ಅಲ್ಲ ಶಿವಬಾಬಾ. ಅವರು ನಿರಾಕಾರಿ ಪ್ರಪಂಚದಲ್ಲಿರುತ್ತಾರೆ. ಮನುಷ್ಯರು ಕೃಷ್ಣನನ್ನು ನೆನಪು ಮಾಡುತ್ತಾರೆ ಆದರೆ ಅವರಂತೂ ವೈಕುಂಠನಿವಾಸಿಯಾಗಿದ್ದಾರೆ. ಋಷಿ-ಮುನಿ ಮುಂತಾದವರೆಲ್ಲಾ ದೇಹಧಾರಿಗಳು ಇಲ್ಲಿಗೆ ಬಂದುಹೋಗಿದ್ದಾರೆ ಆದರೆ ಪರಮಾತ್ಮ ನಿರಾಕಾರನಾಗಿದ್ದಾರೆ ಅವರಿಗೆ ದೇಹವಿಲ್ಲ. ಸರ್ವವ್ಯಾಪಿಯ ಜ್ಞಾನದ ಕಾರಣ ಯಾರ ಬುದ್ಧಿಯೂ ಕೆಲಸ ಮಾಡುವುದಿಲ್ಲ. ತಂದೆಯು ಬಂದು ಬುದ್ಧಿಯ ಬೀಗವನ್ನು ತೆರೆಯುತ್ತಾರೆ. ಇದು ಹೊಸ ಮಾತಾಗಿದೆ. ಅನ್ಯಸತ್ಸಂಗಗಳಲ್ಲಿ ಶಿವತಂದೆಯು ಜ್ಞಾನವನ್ನು ಕೊಡುತ್ತಿದ್ದಾರೆಂದು ತಿಳಿಯುವುದಿಲ್ಲ. ಅಲ್ಲಂತೂ ಎಲ್ಲರೂ ದೇಹಧಾರಿಗಳು ಕುಳಿತಿರುತ್ತಾರೆ. ನಿಮಗೆ ನಿಶ್ಚಯವಿದೆ- ನಾವು ನಿರಾಕಾರ ತಂದೆಯಿಂದ ಕೇಳುತ್ತಿದ್ದೇವೆ. ನಿರಾಕಾರ ತಂದೆಯು ಯಾವಾಗ ಅವಶ್ಯವಾಗಿ ಸಾಕಾರದಲ್ಲಿ ಬಂದರು ಆಗಲೇ ಪರಿಚಯ ಕೊಟ್ಟರು. ಕಲ್ಪ-ಕಲ್ಪವೂ ತಂದೆಯು ಬರುತ್ತಾರೆ, ಬಂದು ಮಾಲೀಕರನ್ನಾಗಿ ಮಾಡುತ್ತಾರೆ ಆದರೂ ಸಹ ಮಾಯೆಯು ಎಷ್ಟೊಂದು ಬೇಸರಪಡಿಸುತ್ತದೆ, ವಿಘ್ನಗಳನ್ನು ಹಾಕುತ್ತದೆ. ರುದ್ರಜ್ಞಾನಯಜ್ಞದಲ್ಲಿ ಅಸುರೀ ವಿಘ್ನಗಳು ಬೀಳುತ್ತವೆ. ದೇಹಾಭಿಮಾನವು ಬರುವುದರಿಂದ ವಿಘ್ನಗಳು ಬರುತ್ತವೆ. ತಂದೆಯು ತಿಳಿಸುತ್ತಾರೆ- ತಮ್ಮನ್ನು ಅಶರೀರಿ ಎಂದು ತಿಳಿಯಿರಿ. ನಾವಂತೂ ತಂದೆಯ ಮಕ್ಕಳಾಗಿದ್ದೇವೆ, ತಂದೆಯು ಹಿಂತಿರುಗಿ ಕರೆದುಕೊಂಡು ಹೋಗಲು ಬಂದಿದ್ದಾರೆ. ಈ ಶರೀರವನ್ನು ಬಿಟ್ಟು ಈಗ ಹಿಂತಿರುಗಿ ಹೋಗಬೇಕಾಗಿದೆ ಎಂದು ತಮ್ಮೊಂದಿಗೆ ಮಾತನಾಡಿಕೊಳ್ಳಿ. ಸೂಕ್ಷ್ಮದೇಹಧಾರಿ ಮತ್ತು ಸ್ಥೂಲ ದೇಹಧಾರಿ ಎಲ್ಲವನ್ನೂ ಬಿಡಬೇಕಾಗಿದೆ. ಪಕ್ಕಾ-ಪಕ್ಕಾ ನಿಶ್ಚಯ ಮಾಡಿಕೊಳ್ಳಬೇಕಾಗಿದೆ- ನಾವಾತ್ಮರು ಪರಮಧಾಮದಿಂದ ಬಂದಿದ್ದೇವೆ. ನಾವು ಅಲ್ಲಿನ ನಿವಾಸಿಗಳಾಗಿದ್ದೇವೆ. ಸತ್ಯಯುಗದಲ್ಲಿ ಇಷ್ಟು ಜನ್ಮಗಳು ರಾಜ್ಯಭಾರ ಮಾಡಿದೆವು, 84 ಜನ್ಮಗಳನ್ನು ತೆಗೆದುಕೊಂಡೆವು, ಈಗ ನಾಟಕವು ಪೂರ್ಣವಾಗುತ್ತದೆ, ನಾವು ಹಿಂತಿರುಗಿ ಹೋಗಬೇಕಾಗಿದೆ. ಮನೆಯಲ್ಲಿ ಏನೇ ಏರುಪೇರಿರಲಿ ಆದರೆ ಒಂದು ಕೋಣೆಯಲ್ಲಿ ಶಿವತಂದೆಯ ಚಿತ್ರವನ್ನಿಟ್ಟುಕೊಳ್ಳಿ.

ಬ್ರಾಹ್ಮಣರು ಸ್ತ್ರೀಯರಿಗೆ ಶಿವನ ಪೂಜೆಯನ್ನು ಮಾಡಬಾರದೆಂದು ಹೇಳುತ್ತಾರೆ ಆದರೆ ಶಿವತಂದೆಯು ಬರುವುದೇ ಮಾತೆಯರಿಗಾಗಿ. ಮಾತೆಯರು ಶಿವನ ಮಂದಿರದಲ್ಲಿ ಹೋಗಿ ಅನೇಕ ಪ್ರಕಾರದ ಪೂಜೆಯನ್ನು ಸಲ್ಲಿಸುತ್ತಾರೆ. ಪೂಜಾರಿಗಳು ಖುಷಿಯಾಗುತ್ತಾರೆ ಏಕೆಂದರೆ ಎಲ್ಲರಿಗಿಂತ ಹೆಚ್ಚಾಗಿ ಮಾತೆಯರು ಹಣವನ್ನಿಡುತ್ತಾರೆ. ಭಕ್ತಿಯ ಸತ್ಯಭಾವನೆಯು ಅಬಲೆಯರಾದ ಮಾತೆಯರಲ್ಲಿರುತ್ತದೆ. ಪುರುಷರಂತೂ ಹಾರುವ ಪಕ್ಷಿಯ ಸಮಾನ ಗಳಿಗೆ-ಗಳಿಗೆ ಹೊರಗೆ ಬರುತ್ತಿರುತ್ತಾರೆ. ಬುದ್ಧಿಯೋಗವು ಬಹಳ ಅಲೆದಾಡುತ್ತಿರುತ್ತದೆ. ಪತ್ನಿಗೂ ಸಹ ಪತಿಯ ಕಡೆ ಬಹಳ ಮೋಹವು ಇರುತ್ತದೆ. ನೀವು ಮಕ್ಕಳಿಗೆ ಇದು ದುಃಖಧಾಮವೆಂದು ಗೊತ್ತಿದೆ. ಈಗ ಸುಖಧಾಮವನ್ನು ಸ್ಥಾಪನೆ ಮಾಡುವ ತಂದೆಯು ಬಂದಿದ್ದಾರೆ ಆದ್ದರಿಂದ ನಾವು ತಂದೆಯನ್ನು ಹೇಗೆ ನೆನಪು ಮಾಡುವುದೆಂದು ಯುಕ್ತಿಯನ್ನು ರಚಿಸಬೇಕಾಗಿದೆ ಏಕೆಂದರೆ ಅವರನ್ನು ಈ ಕಣ್ಣುಗಳಿಂದ ನೋಡಲಾಗುವುದಿಲ್ಲ. ಇವರು ನಮ್ಮ ತಂದೆಯಾಗಿದ್ದಾರೆ ಎಂದು ಆತ್ಮವು ಹೇಳುತ್ತದೆ. ಶಿವನ ಚಿತ್ರವನ್ನಂತೂ ನೋಡುವುದರಿಂದ ಬಹಳ ಖುಷಿಯಾಗುತ್ತದೆ.

ನೀವು ಮಕ್ಕಳ ಯೋಗವೂ ಸಹ ಅವ್ಯಭಿಚಾರಿಯಾಗಿರಬೇಕು. ಶಿವತಂದೆಯ ಚಿತ್ರವನ್ನಿಟ್ಟುಕೊಂಡು ಗಳಿಗೆ-ಗಳಿಗೆಯೂ ನೆನಪು ಮಾಡುತ್ತಾ ಇರಿ. ಬ್ರಹ್ಮಾತಂದೆಯು ತನ್ನ ಉದಾಹರಣೆಯನ್ನು ಕೊಡುತ್ತಾರೆ. ಲಕ್ಷ್ಮೀ-ನಾರಾಯಣ ಚಿತ್ರದೊಂದಿಗೆ ನನಗೆ ಬಹಳ ಪ್ರೀತಿಯಿತ್ತು! ನಂತರ ಒಂದುದಿನ ಈ ವಿಚಾರವು ಬಂದಿತು- ಲಕ್ಷ್ಮಿಯು ದಾಸಿಯಾಗಿ ನಾರಾಯಣನ ಕಾಲನ್ನು ಒತ್ತುತ್ತಿದ್ದಾರೆ ಇದಂತೂ ಸರಿಯಿಲ್ಲವೆಂದೆನಿಸಿತು ಆದ್ದರಿಂದ ಕಲಾಕಾರನಿಗೆ ತಿಳಿಸಿದರು- ಇದರಿಂದ ಲಕ್ಷ್ಮಿಯನ್ನು ಮುಕ್ತಮಾಡಿಸಿದರು, ನಾರಾಯಣನ ಚಿತ್ರವಂತೂ ಸದಾ ಜೇಬಿನಲ್ಲಿ ಇರುತ್ತಿತ್ತು. ಅದನ್ನು ಗಳಿಗೆ-ಗಳಿಗೆಯೂ ನೋಡುತ್ತಿದ್ದರು. ಹೇಗೆ ಮಸ್ತರಾಗಿಬಿಡುತ್ತಿದ್ದರು ಆದರೆ ಗುಪ್ತವಾಗಿ ಮಾಡುತ್ತಿದ್ದರು. ಯಾರೂ ನೋಡಿರಲಿಲ್ಲ, ನೋಡಿದ್ದರೆ ಇವರೇನು ಮಾಡುತ್ತಾರೆಂದು ಕೇಳುತ್ತಿದ್ದರೇನೋ! ಮೊದಲು ಕೃಷ್ಣನೊಂದಿಗೆ ಪ್ರೀತಿಯಿತ್ತು ನಂತರ ಅವರನ್ನು ಬಿಟ್ಟು ವಿಷ್ಣುವಿನ ಜೊತೆ ಪ್ರೀತಿ ಬೆಳೆಯಿತು. ಹೇಗೆ ನೌಧಾಭಕ್ತಿಯಿರುತ್ತದೆಯೋ ಹಾಗೆಯೇ ಈ ನೆನಪೂ ಸಹ ನೌಧಾ ಅರ್ಥಾತ್ ಸದಾ ಒಬ್ಬರ ಜೊತೆಯಿರುವುದು, ಇದರಿಂದ

ಬಹಳಷ್ಟು ಪ್ರಾಪ್ತಿಯಾಗುತ್ತದೆ. ಮನುಷ್ಯರು ಮಾಡುವುದರಿಂದಂತೂ ಅಲ್ಪಕಾಲಕ್ಕಾಗಿ ಸ್ವಲ್ಪ ಸುಖವು ಸಿಗುತ್ತದೆ ನಂತರ ಇನ್ನೊಂದು ಜನ್ಮದಲ್ಲಿಯೂ ಪರಿಶ್ರಮಪಡಬೇಕಾಗುತ್ತದೆ. ಭಕ್ತಿಯಲ್ಲಿಯೂ ವ್ಯಾಪಾರ ಇತ್ಯಾದಿಗಳಲ್ಲಿ ಪರಿಶ್ರಮವಾಗುತ್ತದೆ. ಸಂಪಾದನೆ ಮಾಡಿದರೆ ಮಾತ್ರ ತಿನ್ನಲು ಸಾಧ್ಯ. ತಂದೆಯು ನಿಮಗೆ ಈ ಒಂದು ಜನ್ಮದಲ್ಲಿ ಇಷ್ಟು ಪರಿಶ್ರಮ ಮಾಡಿಸುತ್ತಾರೆ ಆದ್ದರಿಂದ 21 ಜನ್ಮಗಳು ಪ್ರಾಲಬ್ಧವನ್ನು ಭೋಗಿಸುತ್ತೀರಿ. ಸ್ವಲ್ಪವೂ ಸಹ ಪರಿಶ್ರಮಪಡುವ ಅವಶ್ಯಕತೆಯಿರುವುದಿಲ್ಲ. 21 ಜನ್ಮಗಳು ಸದಾ ಸುಖಿಯಾಗಿರುತ್ತೀರಿ ಅಂದಮೇಲೆ ಯಾವ ತಂದೆಯು ಇಂತಹ ಪುರುಷಾರ್ಥ ಮಾಡುವುದನ್ನು ಕಲಿಸುತ್ತಾರೆ ಅವರನ್ನಂತೂ ನೆನಪು ಮಾಡಬೇಕಲ್ಲವೆ. ಶ್ವಾಸ-ಶ್ವಾಸವೂ ನೆನಪು ಮಾಡಿ ಎಂದು ತಂದೆಯು ತಿಳಿಸುತ್ತಾರೆ. ಆ ಗುರುಗಳು ತಮ್ಮ ಶಿಷ್ಯರಿಗೆ ಮಾಲೆಯನ್ನು ಜಪಿಸಿ ರಾಮ-ರಾಮ ಎನ್ನುತ್ತಾ ಇರಿ ಎಂದು ತಿಳಿಸುತ್ತಾರೆ. ಶಿಷ್ಯರು ರಾಮನಾಮವನ್ನು ಜಪಿಸುತ್ತಾ-ಜಪಿಸುತ್ತಾ ರೋಮಾಂಚನವಾಗಿ ನಿಂತುಬಿಡುತ್ತಾರೆ. ರಾಮನಾಮ ಮಸ್ತಿಯಲ್ಲಿ ತೂಗುತ್ತಾರೆ. ರಾಮಪುರಿಯಲ್ಲಿ ತಲುಪಿಬಿಟ್ಟೆವು ಎನ್ನುವ ಅನುಭವ ಮಾಡುತ್ತಾರೆ. ನಿಮಗಂತೂ ತಂದೆಯು ತಿಳಿಸುತ್ತಾರೆ- ಒಬ್ಬ ತಂದೆಯ ನೆನಪನ್ನು ನಿರಂತರ ಮಾಡಿ ಮತ್ತೇನೂ ನೆನಪಿಗೆ ಬರದಿರಲಿ ಆದರೆ ಮಾಯೆಯೂ ಸಹ ಎದುರಿಸುತ್ತದೆ. ಭಕ್ತಿಮಾರ್ಗದಲ್ಲಿ ಮಾಯೆಯು ಎದುರಿಸುವುದಿಲ್ಲ. ಇದು ಮಾಯೆ ಮತ್ತು ಈಶ್ವರನ ಮಕ್ಕಳ ಯುದ್ಧವಾಗಿದೆ. ನಾಟಕವನ್ನೂ ಸಹ ಮಾಡುತ್ತಾರೆ- ಭಗವಂತನು ಹೀಗೆ ಹೇಳುತ್ತಾರೆ, ಮಾಯೆ ಹಾಗೆ ಹೇಳುತ್ತದೆ. ಈಗ ಸಂಗಮಯುಗವಾಗಿದೆ. ಮಾಯೆಯ ಉಲ್ಟಾ-ಸುಲ್ಟಾ ಸಂಕಲ್ಪ-ವಿಕಲ್ಪಗಳಂತೂ ಬರುತ್ತಿರುತ್ತವೆ, ಬಿರುಗಾಳಿಗಳು ಇಷ್ಟೂ ಜೋರಾಗಿ ಬರುತ್ತವೆ ಅವು ಮನುಷ್ಯರನ್ನೂ ಸಹ ಹಾರಿಸಿಕೊಂಡು ಹೋಗಿ ದೂರ ಎಸೆಯುತ್ತವೆ. ಇದು ಮಾಯಾ ರಾವಣನ ಬಿರುಗಾಳಿಯಾಗಿದೆ ಅದರಿಂದ ಪಾರಾಗುವ ಯುಕ್ತಿಗಳನ್ನಂತೂ ತಂದೆಯು ತಿಳಿಸುತ್ತಿರುತ್ತಾರೆ. ನಮಗೆ ಪರಮಪಿತ ಪರಮಾತ್ಮನು ರಾಜಯೋಗವನ್ನು ಕಲಿಸುತ್ತಾರೆಂದು ನೀವು ಹೇಳುತ್ತೀರಿ.

ನಿಮಗೆ ಈ ಸನ್ಯಾಸವನ್ನು ಯಾರು ಮಾಡಿಸಿದರು? ನಿಮ್ಮ ಗುರುಗಳು ಯಾರು? ಎಂದು ನಿಮ್ಮನ್ನು ಯಾರಾದರೂ ಕೇಳಿದರೆ ಅವರಿಗೆ ತಿಳಿಸಿ- ನಮಗೆ ಪರಮಪಿತ ಪರಮಾತ್ಮನೇ ಗುರು. ಭಗವಂತನೇ ಬಂದು ಸನ್ಯಾಸ ಮಾಡಿಸುವಂತಹವರು ಮತ್ತ್ಯಾರೂ ಇರುವುದಿಲ್ಲ. ಆ ಎಲ್ಲಾ ಮನುಷ್ಯರು ಮನುಷ್ಯರಿಗೆ ಮಾಡಿಸುತ್ತಾರೆ ಆದರೆ ಇಲ್ಲಿ ತಂದೆಯು ಬಂದು ತಿಳಿಸುತ್ತಾರೆ- ದೇಹಸಹಿತ ದೇಹದ ಯಾವುದೇ ಸಂಬಂಧಗಳಿವೆಯೋ ಅವನ್ನೆಲ್ಲಾ ಬಿಟ್ಟುಬಿಡಿ. ಈ ಹಳೆಯ ಪ್ರಪಂಚದ ತ್ಯಾಗ ಮಾಡಿ ಹೊಸಪ್ರಪಂಚವನ್ನು ಸ್ಥಾಪನೆ ಮಾಡಿ ಎನ್ನುವ ರೀತಿ ಸನ್ಯಾಸಿಗಳು ಹೇಳುತ್ತಾರೆಯೇ! ಈಗಂತೂ ಸಾಕಾರ ರೂಪದಲ್ಲಿ ಹಳೆಯ ಪ್ರಪಂಚದ ವಿನಾಶವಾಗಲಿದೆ ಆದ್ದರಿಂದ ಎಲ್ಲವನ್ನೂ ಬುದ್ಧಿಯಿಂದ ತ್ಯಾಗ ಮಾಡಿ ಒಬ್ಬ ತಂದೆಯೊಂದಿಗೆ ಬುದ್ಧಿಯನ್ನಿಡಬೇಕಾಗಿದೆ. ನೀವು ತಂದೆಯ ಜೊತೆ ನಿಶ್ಚಿತಾರ್ಥ ಮಾಡಿಕೊಳ್ಳುತ್ತೀರಲ್ಲವೆ. ದೇಹಧಾರಿಗಳನ್ನು ನೆನಪು ಮಾಡಿದರೆ ಇದು ಕಚ್ಚಾ ನಿಶ್ಚಿತಾರ್ಥವಾಗಿಬಿಡುವುದು. ಸರ್ವ ಧರ್ಮಾನ್....... ನಾನು ಇಂತಹವನಾಗಿದ್ದೇನೆ, ನಾನು ಇದಾಗಿದ್ದೇನೆ ಇದೆಲ್ಲವನ್ನೂ ಬಿಟ್ಟು ತಮ್ಮನ್ನು ಆತ್ಮನೆಂದು ತಿಳಿಯಿರಿ. 84 ಜನ್ಮಗಳನ್ನಂತೂ ನೀವು ತಿಳಿದುಕೊಂಡಿದ್ದೀರಿ. ಈಗ ಖುಷಿಯಿಂದ ಹಿಂದಿರುಗುತ್ತೀರಿ ಅಂದಮೇಲೆ ಚಪ್ಪಾಳೆ ತಟ್ಟಬೇಕು. ನಾವಾತ್ಮರು ಒಂದು ಶರೀರವನ್ನು ಬಿಟ್ಟು ಇನ್ನೊಂದನ್ನು ತೆಗೆದುಕೊಳ್ಳುತ್ತೇವೆ. ತಮ್ಮನ್ನು ಆತ್ಮನೆಂದು ತಿಳಿಯಬೇಕಾಗಿದೆ. ನಾವಾತ್ಮರು ಮೊಟ್ಟಮೊದಲು ಸುಂದರರಾಗಿದ್ದೆವು ನಂತರ 84 ಜನ್ಮಗಳನ್ನು ತೆಗೆದುಕೊಂಡೆವು. ಈಗ ಹಿಂತಿರುಗಿ ಹೋಗಿ ಪುನಃ ಬಂದು ಸ್ವರ್ಗದಲ್ಲಿ ರಾಜ್ಯ ಮಾಡುತ್ತೇವೆ. ಈ ಸ್ವದರ್ಶನ ಚಕ್ರವನ್ನು ತಿರುಗಿಸುವುದು ಬಹಳ ಸಹಜವಾಗಿದೆ. ಶಿವನ ಚಿತ್ರವಂತೂ ಜೇಬಿನಲ್ಲಿ ಸದಾ ಇರಲಿ. ಬಾಬಾ ತಾವು ಬಂದಿದ್ದೀರಿ, ಎಷ್ಟು ಮಧುರರಾಗಿದ್ದೀರಿ, ನೀವು ನಮ್ಮ ತಂದೆಯಲ್ಲವೆ- ಹೀಗೆ ಮಾತನಾಡಬೇಕು. ಕೃಷ್ಣನ ಜೊತೆ ಭಕ್ತಿಮಾರ್ಗದಲ್ಲಿ ಹೀಗೆ ಮಾತಾನಾಡುತ್ತಿದ್ದಿರಲ್ಲವೆ. ಶಿವನ ತುಂಬಾ ಸುಂದರವಾದ ಲಾಕೆಟನ್ನು ಚಿನ್ನ, ಬೆಳ್ಳಿಯಿಂದ ಮಾಡಿಸುತ್ತಾರೆ. ಬಡವರಿಗೆ ಚಿನ್ನದ್ದು, ಸಾಹುಕಾರರಿಗೆ ಬೆಳ್ಳಿಯದನ್ನು ಕೊಡುತ್ತಾರೆ. ಈ ಮಾತೆಯರೂ ಸಹ ಬಹಳ ಮಧುರರಾಗಿದ್ದಾರೆ. ಹಳ್ಳಿಯವರಲ್ಲಿ ಭಾವನೆಯು ಚೆನ್ನಾಗಿರುತ್ತದೆ. ಸಾಧಾರಣ ಮಕ್ಕಳನ್ನು ನೋಡಿ ತಂದೆಯೂ ಸಹ ಖುಷಿಪಡುತ್ತಾರೆ. ಕೃಷ್ಣನನ್ನೂ ಸಹ ಹಳ್ಳಿಯ ಹುಡುಗನೆಂದು ಹೇಳುತ್ತಾರಲ್ಲವೆ ಆದರೆ ಕೃಷ್ಣನಂತೂ ಹಳ್ಳಿಯ ಹುಡುಗ ಅಥವಾ ಗೊಲ್ಲ ಕೃಷ್ಣನಾಗಲು ಸಾಧ್ಯವಿಲ್ಲ. ಅವರಂತೂ ಸ್ವರ್ಗದ ಮಾಲೀಕನಾಗಿದ್ದಾರೆ. ಇವರ ಮತ್ತು ಕೃಷ್ಣನ ಮಾತುಗಳನ್ನು ಸೇರಿಸಿಬಿಟ್ಟಿದ್ದಾರೆ. ಹಳ್ಳಿಯ ಪೂರ್ಣ ಅನುಭವ ಇವರಿಗೆ (ಬ್ರಹ್ಮಾ) ಇದೆ. ಅಂದಾಗ ಶಿವತಂದೆಯಾಗಲಿ ಅಥವಾ ಕೃಷ್ಣನಾಗಲಿ ಹಳ್ಳಿಯ ಹುಡುಗನಾಗಲು ಸಾಧ್ಯವಿಲ್ಲ. ಹೌದು, ಈ ದಾದಾರವರು ಚಿಕ್ಕಂದಿನಲ್ಲಿ ಆಗಿದ್ದರು. ಇವರು ನಾನು ಹಳ್ಳಿಯಲ್ಲಿಯೇ ಬೆಳೆದೆನೆಂದು ತಿಳಿಸುತ್ತಾರೆ ಅಂದಾಗ ಅಂತಹ ಸಾಧಾರಣ ಶರೀರದಲ್ಲಿ ತಂದೆಯು ಬಂದು ಪ್ರವೇಶ ಮಾಡಿದ್ದಾರೆ. ತಂದೆಯು ಮುಖ್ಯಮಾತನ್ನು ತಿಳಿಸಿದ್ದಾರೆ- ಎಲ್ಲಾ ಆಧಾರವು ನೆನಪಿನ ಮೇಲಿದೆ. ನೆನಪನ್ನೆಂದೂ ಮರೆಯಬಾರದು. ಲೌಕಿಕ ಮಗು ನಾನು ತಂದೆಯನ್ನು ಮರೆತುಹೋಗಿದ್ದೇನೆಂದು ಎಂದಾದರೂ ಹೇಳುತ್ತದೆಯೇ? ಪ್ರಿಯತಮೆಯು ಎಂದಾದರೂ ಪ್ರಿಯತಮನನ್ನು ಮರೆಯುತ್ತಾಳೆಯೇ? ಅಸಾಧ್ಯ. ಇದು ನೀವು ಮಕ್ಕಳಿಗಾಗಿ ಪರಿಶ್ರಮವಿದೆ. ನಿರಂತರ ನೆನಪಿನ ಅಭ್ಯಾಸದಿಂದಲೇ ವಿಕರ್ಮ ವಿನಾಶವಾಗುತ್ತದೆ. ಇಲ್ಲದಿದ್ದರೆ ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ ಮತ್ತು ವಿಜಯಮಾಲೆಯಲ್ಲಿ ಬರಲು ಸಾಧ್ಯವಿಲ್ಲ. ತಂದೆಯದು ಚಮತ್ಕಾರವಾಗಿದೆ- ವೃದ್ಧರು, ಬಡವರು, ಗಣಿಕೆಯರು, ಅಹಲ್ಯೆಯರು, ಕುಬ್ಜೆಯರು ಮುಂತಾದವರನ್ನು ತಂದೆಯು ಬಂದು ತನ್ನವರನ್ನಾಗಿ ಮಾಡಿಕೊಳ್ಳುತ್ತಾರೆ. ಹಾಗೆ ನೋಡಿದರೆ ಯಾವುದೇ ಚಿತ್ರವೂ ನಿಮಗೆ ಅವಶ್ಯಕತೆಯಿಲ್ಲ ಆದರೆ ಮಾಯೆಯು ನಿಮ್ಮನ್ನು ಮರೆಸಿಬಿಡುತ್ತದೆ ಆದ್ದರಿಂದ ಚಿತ್ರವನ್ನಿಟ್ಟುಕೊಳ್ಳಬೇಕು. ನಾವು ತಂದೆಯ ಬಳಿ

ಹೋಗುತ್ತೇವೆಂದು ಬುದ್ಧಿಯಲ್ಲಿರಬೇಕಾಗಿದೆ. ಮುಕ್ತಿ-ಜೀವನ್ಮುಕ್ತಿಯ ಮಾರ್ಗವನ್ನಂತೂ ನೋಡಿಬಿಟ್ಟಿದ್ದೇವೆ. ಮತ್ತ್ಯಾರೂ ಇಂತಹ ಮಾರ್ಗದರ್ಶಕರು ಇರುವುದೇ ಇಲ್ಲ. ಇದನ್ನು ಇಂದ್ರಪ್ರಸ್ಥವೆಂದು ಹೇಳುತ್ತಾರೆ. ಅಂತರ್ಯಾಮಿ ಆಗಿದ್ದಾರಲ್ಲವೆ. ಈ ಬ್ರಹ್ಮಾ ಬಾಹರ್ಯಾಮಿ ಆಗಿದ್ದಾರೆ. ಇವರು ಈ ಪತಿತರು ಮುಚ್ಚಿಟ್ಟುಕೊಂಡು ಕುಳಿತಿದ್ದಾರೆಂದು ಶಿವತಂದೆಗೆ ಗೊತ್ತಾಗಿಬಿಡುತ್ತದೆ ಅಂದಾಗ ಯಾರು ಇಂತಹ ಪತಿತರನ್ನು ಕರೆತಂದರು ಅವರಿಗೆ ಮತ್ತು ಯಾವ ಪತಿತರು ಬಂದು ಕುಳಿತುಕೊಂಡರು ಅವರಿಬ್ಬರಿಗೂ ಶಿಕ್ಷೆಯು ಸಿಗುತ್ತದೆ ಆದ್ದರಿಂದ ಪತಿತರನ್ನಂತೂ ಎಂದೂ ಕರೆತರಬಾರದು. ಇಲ್ಲಿನ ನಿಯಮವು ಇಷ್ಟು ಕಠಿಣವಾಗಿದೆ, ಯಾವುದೇ ಪತಿತರನ್ನು ಇಲ್ಲಿ ಕೂರಿಸಬಾರದು. ಇಲ್ಲದಿದ್ದರೆ ಬಹಳ ಕಠಿಣ ಶಿಕ್ಷೆಗೆ ಭಾಗಿಗಳಾಗಿಬಿಡುತ್ತೀರಿ. ಯಾವುದೇ ಕಳ್ಳತನ, ಮೋಸ ನಡೆಯಲು ಸಾಧ್ಯವಿಲ್ಲ. ಪಾಪ ಮತ್ತು ಪುಣ್ಯದ ಲೆಕ್ಕವು ಧರ್ಮರಾಜನ ಬಳಿ ಇರುತ್ತದೆಯಲ್ಲವೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಎಲ್ಲರಿಂದ ಬುದ್ಧಿಯನ್ನು ತೆಗೆದು ಎಲ್ಲಾ ನೆನಪನ್ನು ಸೇರಿಸಿ ಒಬ್ಬ ತಂದೆಯ ನೆನಪಿನಲ್ಲಿರಬೇಕಾಗಿದೆ. ಶಿವತಂದೆಯ ಕೋಣೆಯನ್ನು ಮಾಡಿ ಅವರ ಅವ್ಯಭಿಚಾರಿ ನೆನಪಿನಲ್ಲಿ ಕುಳಿತುಕೊಳ್ಳಬೇಕು.

2. ತಮ್ಮೊಂದಿಗೆ ತಾವು ಮಧುರಾತಿ ಮಧುರ ಮಾತುಗಳನ್ನಾಡಬೇಕು. ಮೊದಲು ನಾವು ಎಷ್ಟು ಸುಂದರರಾಗಿದ್ದೆವು ನಂತರ 84 ಜನ್ಮಗಳನ್ನು ತೆಗೆದುಕೊಂಡೆವು. ಈಗ ಖುಷಿಯಿಂದ ಹಿಂತಿರುಗಿ ಹೋಗುತ್ತೇವೆ. ಹೀಗೆ ತಮ್ಮೊಂದಿಗೆ ತಾವು ಮಾತನಾಡಿಕೊಂದು ಸ್ವದರ್ಶನ ಚಕ್ರವನ್ನು ತಿರುಗಿಸಬೇಕಾಗಿದೆ.

ವರದಾನ: ಸ್ವಚಿಂತನೆ ಮತ್ತು ಸ್ವದರ್ಶನದ ಮುಖಾಂತರ ವಜ್ರ ಸಮಾನ ಅಮೂಲ್ಯ ಜೀವನದ ಅನುಭವ ಮಡುವಂತಹ ಬೇದಾಗ್(ಕಲೆ ರಹಿತ) ಭವ

ವಜ್ರ ಸಮಾನ ಅಮೂಲ್ಯ ಜೀವನದ ಅನುಭವ ಮಾಡಬೇಕಾದರೆ ಸದಾ ಸ್ವಚಿಂತನೆ ಮಾಡಿ ಮತ್ತು ಸ್ವದರ್ಶನ ಚಕ್ರಧಾರಿಗಳಾಗಿ ಏಕೆಂದರೆ ವಜ್ರವನ್ನು ಕಲೆಮಾಡುವಂತಹದು ಕೇವಲ ಎರಡು ಮಾತು- ಒಂದು ಪರದರ್ಶನ, ಇನ್ನೊಂದು ಪರಚಿಂತನೆ. ಇದೇ ಎರಡು ಮಾತು ಸಂಗದ ರಂಗಿನಲ್ಲಿ ಸ್ವಚ್ಛ ವಜ್ರವನ್ನು ಕಲೆಯುಳ್ಳ ವಜ್ರವನ್ನಾಗಿ ಮಾಡಿಬಿಡುವುದು ಆದ್ದರಿಂದ ಈ ಮೂಲ ಬೀಜವನ್ನು ಸಮಾಪ್ತಿ ಮಾಡಿ ಸ್ವಚಿಂತನೆ ಮಾಡಿ ಮತ್ತು ಸ್ವದರ್ಶನ ಚಕ್ರ ತಿರುಗಿಸಿ ಆಗ ಧೂಳು ಮತ್ತು ಕಲೆ ಅಂಟಲು ಸಾಧ್ಯವಿಲ್ಲ. ಸದಾ ಕಲೆ ರಹಿತ ಸತ್ಯ ವಜ್ರ, ಹೊಳೆಯುತ್ತಿರುವ ಅಮೂಲ್ಯ ವಜ್ರವಾಗಿಬಿಡುವರು.

ಸ್ಲೋಗನ್: ವಿಚಿತ್ರ ತಂದೆಯ ಚಿತ್ರ ಮತ್ತು ಚರಿತ್ರೆಯನ್ನು ನೆನಪು ಮಾಡುವಂತಹವರೇ ಚರಿತ್ರವಾನ್ ಆಗಿರುವರು.